ಕರ್ನಾಟಕ ವಿಧಾನ ಪರಿಷತ್ತು

1. ಸದಸ್ಯರ ಹೆಸರು : ಶ್ರೀ ಎನ್. ಅಪ್ಪಾಜಿಗೌಡ
2. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 645
3. ಉತ್ತರಿಸಬೇಕಾದ ದಿನಾಂಕ : 17-12-2021

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ಪ್ರಧಾನಮಂತ್ರಿ ಆದರ್ಶ ಗ್ರಾಮ ಯೋಜನೆ ಯಾವ ವರ್ಷದಿಂದ ಜಾರಿಯಲ್ಲಿದೆ; ಈ ಯೋಜನೆಯನ್ವಯ ಆದರ್ಶ ಗ್ರಾಮ ಯೋಜನೆಗೆ ಒಳಪಡುವ ಗ್ರಾಮಕ್ಕೆ ಸರ್ಕಾರದ ಸುತ್ತೋಲೆಯನ್ವಯ ಯಾವ ಯಾವ ಮಾನದಂಡಗಳು ಅನ್ವಯಸುತ್ತದೆ; (ಸರ್ಕಾರದ ಸುತ್ತೋಲೆ ಪ್ರತಿ ನೀಡುವುದು)	ಸಂಸದ್ ಆದರ್ಶ ಗ್ರಾಮ ಯೋಜನೆಯು 2014 ರಿಂದ ಜಾರಿಯಲ್ಲಿದೆ. ಈ ಯೋಜನೆಗೆ ಒಳಪಡುವ ಮಾನದಂಡಗಳನ್ನು **ಅನುಬಂಧ-1** ಎಂದು ಗುರುತಿಸಿ ಲಗತ್ತಿಸಿದೆ.
ಆ)	ಸಂಸದರು, ರಾಜ್ಯ ಸಭಾ ಸದಸ್ಯರು ಇಲ್ಲಿಯವರೆಗೆ ಕಳೆದ 3 ವರ್ಷಗಳಲ್ಲಿ ರಾಜ್ಯದಲ್ಲಿ ಎಷ್ಟು ಗ್ರಾಮಗಳನ್ನು ಈ ಯೋಜನೆಗೆ ಆಯ್ಕೆ ಮಾಡಿದ್ದಾರೆ; (ಸಂಸದರು/ರಾಜ್ಯಸಭಾ ಸದಸ್ಯರವಾರು ಜಿಲ್ಲಾವಾರು ಗ್ರಾಮಗಳ ಮಾಹಿತಿಯನ್ನು ನೀಡುವುದು)	ಸಂಸದರು ಹಾಗೂ ರಾಜ್ಯ ಸಭಾ ಸದಸ್ಯರು ಇಲ್ಲಿಯವರೆಗೂ ಕಳೆದ 3 ವರ್ಷಗಳಲ್ಲಿ 25 ಗ್ರಾಮಗಳನ್ನು ಸಂಸದ್ ಆದರ್ಶ ಗ್ರಾಮ ಯೋಜನೆಯಡಿ ಆಯ್ಕೆ ಮಾಡಿದ್ದಾರೆ (ಜಿಲ್ಲಾವಾರು ಮಾಹಿತಿಯನ್ನು **ಅನುಬಂಧ-2** ಎಂದು ಗುರುತಿಸಿ ಲಗತ್ತಿಸಿದೆ.)
ಇ)	ಪ್ರಧಾನಮಂತ್ರಿ ಆದರ್ಶಗ್ರಾಮ ಯೋಜನೆಯಡಿ ಗ್ರಾಮದ ಅಭಿವೃದ್ಧಿಗೆ ಮೀಸಲಾಗಿರುವ ಅನುದಾನವೆಷ್ಟು; ಈ ಅನುದಾನದಲ್ಲಿ ಗ್ರಾಮ ಯಾವ ಯಾವ ಅಭಿವೃದ್ಧಿ ಕಾಮಗಾರಿಗಳನ್ನು ಮಾಡಬಹುದು; (ಕಾಮಗಾರಿ ಅನುಷ್ಠಾನ ಸಂಬಂಧ ಸುತ್ತೋಲೆಯ ಪ್ರತಿಯನ್ನು ನೀಡುವುದು)	ಸಂಸದ್ ಆದರ್ಶ ಗ್ರಾಮ ಯೋಜನೆಗೆ ಯಾವುದೇ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಅನುದಾನವಿರುವುದಿಲ್ಲ.
ಈ)	ಯೋಜನೆ ಪ್ರಾರಂಭವಾದಾಗಿನಿಂದ ಮಂಡ್ಯ ಜಿಲ್ಲೆಯಲ್ಲಿ ಈ ಯೋಜನೆಯಡಿ ಆಯ್ಕೆಯಾದ ಗ್ರಾಮಗಳಾವುವು; ಕಾಮಗಾರಿ ಯಾವ ಹಂತದಲ್ಲಿದೆ? (ತಾಲ್ಲೂಕುವಾರು ಸಂಪೂರ್ಣ ವಿವರ ನೀಡುವುದು)	ಸಂಸದ್ ಆದರ್ಶ ಗ್ರಾಮ ಯೋಜನೆಯು ಪ್ರಾರಂಭವಾದಾಗಿನಿಂದ ಮಂಡ್ಯ ಜಿಲ್ಲೆಯಲ್ಲಿ ಆಯ್ಕೆಯಾಗಿರುವ ಗ್ರಾಮಗಳ ಮಾಹಿತಿಯನ್ನು **ಅನುಬಂಧ-3** ಎಂದು ಗುರುತಿಸಿ ಲಗತ್ತಿಸಿದೆ.

ಸಂಖ್ಯೆ: ಗ್ರಾಅಪ 82 (13) ಉಖಾಯೋ 2021

(ಕೆ. ಎಸ್. ಈಶ್ವರಪ್ಪ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಅನುಬಂಧ - 1

2. ಗುರಿ

ಮಹಾತ್ಮ ಗಾಂಧಿಯವರ ಸಮಗ್ರ ಹಾಗೂ ಸಾವಯವ ದೃಷ್ಟಿಕೋನವನ್ನು ಸದರಿ ಪ್ರಸ್ತುತ ಸನ್ನಿವೇಶಕ್ಕೆ ಅನುಗುಣವಾಗಿ ಕಾರ್ಯರೂಪಕ್ಕೆ ತರುವುದು ಈ ಸಂಸತ್ತಿನ ಆದರ್ಶ ಗ್ರಾಮ ಯೋಜನೆಯ ಗುರಿಯಾಗಿದೆ.

3. ಸಂಸತ್ತಿನ ಆದರ್ಶ ಗ್ರಾಮ ಯೋಜನೆಯ ಮೌಲ್ಯಗಳು

ಮೂಲ ಸೌಕರ್ಯಗಳ ಅಭಿವೃದ್ಧಿಯನ್ನೂ ಮೀರಿ ಗ್ರಾಮಗಳು ಮತ್ತು ಗ್ರಾಮಸ್ಥರಲ್ಲಿ ಕೆಲವೊಂದು ನಿರ್ಧಿಷ್ಟ ಮೌಲ್ಯಗಳನ್ನು ಹುಟ್ಟುಹಾಕಿ, ಅವರು ಇತರರಿಗೆ ಮಾದರಿಯಾಗಿ ರೂಪಾಂತರಗೊಳ್ಳುವುದರತ್ತ ಈ ಸಂಸತ್ತಿನ ಆದರ್ಶ ಗ್ರಾಮ ಯೋಜನೆಯು ಗುರಿಯಿಟ್ಟಿದೆ. ಈ ಮೌಲ್ಯಗಳೇನೆಂದರೆ:

i. ಜನರ ಭಾಗವಹಿಸುವಿಕೆಯನ್ನೇ ಅದೇ ಕೊನೆಯೆಂದು ಅಳವಡಿಸಿಕೊಳ್ಳುವುದು – ಗ್ರಾಮ ಜೀವನದ ಎಲ್ಲಾ ಅಂಶಗಳಲ್ಲಿ ವಿಶೇಷವಾಗಿ ಆಡಳಿತಕ್ಕೆ ಸಂಬಂಧಿಸಿದ ನಿರ್ಧಾರಗಳನ್ನು ಕೈಗೊಳ್ಳುವುದರಲ್ಲಿ ಸಮಾಜದ ಎಲ್ಲಾ ವರ್ಗಗಳ ತೊಡಗಿಸಿಕೊಳ್ಳುವಿಕೆಯನ್ನು ಖಾತರಿಪಡಿಸಿಕೊಳ್ಳುವುದು.

ii. ಅಂತ್ಯೋದಯಕ್ಕೆ ಅನುಸಾರವಾಗಿ– ಗ್ರಾಮದಲ್ಲಿನ "ಬಡ ಮತ್ತು ದುರ್ಬಲ ವ್ಯಕ್ತಿಯ" ಯೋಗಕ್ಷೇಮವನ್ನು ಸಾಧಿಸಲು ಅನುವು ಮಾಡಿಕೊಡುವುದು

iii. ಲಿಂಗ ಸಮಾನತೆ ಮತ್ತು ಸ್ತ್ರೀಯರನ್ನು ಗೌರವಿಸುವುದನ್ನು ದೃಢೀಕರಿಸುವುದು

iv. ಸಾಮಾಜಿಕ ನ್ಯಾಯವನ್ನು ಖಾತರಿಪಡಿಸಿಕೊಳ್ಳುವುದು

v. ಕಾಯಕಕ್ಕೆ ಗೌರವ ಹಾಗೂ ಸಮುದಾಯದ ಸೇವೆ ಮತ್ತು ಸ್ವಯಂಸೇವಾ ಮನೋಭಾವದ ಚೈತನ್ಯವನ್ನು ಹುಟ್ಟಿಸುವುದು

vi. ಸ್ವಚ್ಛತೆಯ ಸಂಸ್ಕೃತಿಯನ್ನು ಉತ್ತೇಜಿಸುವುದು

vii. ಪ್ರಕೃತಿಯೊಂದಿಗೆ ಸ್ಪಂದಿಸುತ್ತಾ ಜೀವಿಸುವುದು – ಅಭಿವೃದ್ಧಿ ಮತ್ತು ಪರಿಸರ ವಿಜ್ಞಾನದ ನಡುವೆ ಸಮತೋಲನವನ್ನು ಖಾತರಿಪಡಿಸಿಕೊಳ್ಳುವುದು

viii. ಸ್ಥಳೀಯ ಸಾಂಸ್ಕೃತಿಕ ಪರಂಪರೆಯನ್ನು ಉಳಿಸುವುದು ಮತ್ತು ಉತ್ತೇಜಿಸುವುದು

ix. ಪರಸ್ಪರ ಸಹಕಾರ, ಸ್ವ–ಸಹಾಯ ಮತ್ತು ಸ್ವಾವಲಂಬನೆಯನ್ನು ಉತ್ತೇಜಿಸುವುದು

x. ಗ್ರಾಮದ ಸಮುದಾಯದಲ್ಲಿ ಶಾಂತಿ ಮತ್ತು ಸಾಮರಸ್ಯವನ್ನು ಬೆಳೆಸುವುದು

xi. ಸಾರ್ವಜನಿಕ ಜೀವನದಲ್ಲಿ ಪಾರದರ್ಶಕತೆ, ಹೊಣೆಗಾರಿಕೆ ಮತ್ತು ಪ್ರಾಮಾಣಿಕತೆಯನ್ನು ಮೂಡಿಸುವುದು

xii. ಸ್ಥಳಿಯ ಸ್ವ ಆಡಳಿತವನ್ನು ಪೋಷಿಸುವುದು ಭಾರತದ ಸಂವಿಧಾನದಲ್ಲಿನ ಮೂಲಭೂತ ಹಕ್ಕುಗಳು ಮತ್ತು ಕರ್ತವ್ಯಗಳೊಂದಿಗೆ ಪ್ರತಿಷ್ಠಾಪಿತವಾಗಿರುವ ಮೌಲ್ಯಗಳಿಗೆ ಅನುಸಾರವಾಗಿರುವುದು

4. ಉದ್ದೇಶಗಳು

ಸಂಸತ್ತಿನ ಆದರ್ಶ ಗ್ರಾಮ ಯೋಜನೆಯ ಮುಖ್ಯ ಉದ್ದೇಶಗಳು:

i. ಗುರುತಿಸಲ್ಪಟ್ಟಂತಹ ಗ್ರಾಮ ಪಂಚಾಯತ್‌ಗಳಲ್ಲಿ ಸಮಗ್ರ ಅಭಿವೃದ್ಧಿಯನ್ನು ಮುನ್ನಡೆಸುವಂತಹ ಪ್ರಕ್ರಿಯೆಗಳನ್ನು ಪ್ರಚೋದಿಸುವುದು

ii. ಜನಸಂಖ್ಯೆಯ ಎಲ್ಲಾ ವರ್ಗಗಳ ಜೀವನ ಗುಣಮಟ್ಟದ ಪ್ರಮಾಣವನ್ನು ಈ ಕೆಳಗಿನವುಗಳಿಂದ ಗಣನೀಯವಾಗಿ ಸುಧಾರಿಸುವುದು –

  a. ಸುಧಾರಿತ ಮೂಲಸೌಕರ್ಯಗಳು
  b. ಅಧಿಕ ಉತ್ಪಾದನೆ
  c. ವರ್ಧಿತ ಮಾನವ ಅಭಿವೃದ್ಧಿ
  d. ಉತ್ತಮ ಜೀವನಾಧಾರದ ಅವಕಾಶಗಳು
  e. ಕಡಿಮೆಯಾದ ತಾರತಮ್ಯತೆ
  f. ಹಕ್ಕುಗಳು ಮತ್ತು ಅಧಿಕಾರಗಳಿಗೆ ಪ್ರವೇಶ
  g. ವಿಸ್ತಾರಿತ ಸಾಮಾಜಿಕ ಸಂಚಲನೆ
  h. ಉತ್ಕೃಷ್ಟಗೊಂಡ ಸಾಮಾಜಿಕ ಹೂಡಿಕೆ (ಬಂಡವಾಳ)

iii. ನೆರೆಯ ಗ್ರಾಮ ಪಂಚಾಯತ್‌ಗಳು ತಿಳಿದು, ಅಳವಡಿಸಿಕೊಳ್ಳುವಂತೆ ಸ್ಫೂರ್ತಿ ತುಂಬುವ ಮತ್ತು ಪ್ರೇರೇಪಿಸುವಂತಹ ಸ್ಥಳೀಯ ಮಟ್ಟದ ಅಭಿವೃದ್ಧಿಯ ಮಾದರಿಗಳನ್ನು ಮತ್ತು ಪರಿಣಾಮಕಾರಿ ಸ್ಥಳೀಯ ಆಡಳಿತದ ಮಾದರಿಗಳನ್ನು ಸೃಷ್ಟಿಸುವುದು

iv. ಇತರ ಗ್ರಾಮ ಪಂಚಾಯತ್‌ಗಳನ್ನು ತರಬೇತುಗೊಳಿಸಲು, ಗುರುತಿಸಲ್ಪಟ್ಟ ಆದರ್ಶ ಗ್ರಾಮಗಳನ್ನು ಸ್ಥಳೀಯ ಅಭಿವೃದ್ಧಿಯ ಶಾಲೆಯೆಂದು ಪೋಷಿಸುವುದು

ಗ್ರಾಮಗಳು ಮತ್ತು ಗ್ರಾಮಸ್ಥರಲ್ಲಿ ಕೆಲವೊಂದು ನಿರ್ಧಿಷ್ಟ ಮೌಲ್ಯಗಳನ್ನು ಹುಟ್ಟುಹಾಕಿ, ಅವರು ಇತರರಿಗೆ ಮಾದರಿಯಾಗಿ ರೂಪಾಂತರಗೊಳ್ಳುವುದರತ್ತ ಈ ಸಂಸತ್ತಿನ ಆದರ್ಶ ಗ್ರಾಮ ಯೋಜನೆಯು ಗುರಿಯಿಟ್ಟಿದೆ.

5. ಹಿಂದಿನವುಗಳಿಂದ (ಇತಿಹಾಸದಿಂದ) ಕಲಿಕೆ

ಕೆಲವು ಗ್ರಾಮ ಪಂಚಾಯತ್‌ಗಳು ಸಮಗ್ರ ಸ್ಥಳೀಯ ಅಭಿವೃದ್ಧಿಯಲ್ಲಿ ಅಸಾಧಾರಣ ಸಾಧನೆಯನ್ನು ಮಾಡಿದ್ದು, ಇದಕ್ಕೆ ಕಾರಣ ಸ್ಫೂರ್ತಿದಾಯಕ ನಾಯಕತ್ವ ಮತ್ತು ಸಮಷ್ಟಿಯ ಕ್ರಮಗಳು. ಇಂತಹ ಅತ್ಯುತ್ತಮ ಆಚರಣೆಗಳಿಂದ ಕಲಿಯುವಾಗ, ಸ್ಥಳೀಯ ಮಟ್ಟದಲ್ಲಿ ಅಭಿವೃದ್ಧಿಗೆ ಸಂಬಂಧಿಸಿದ ಹಿಂದಿನ ಮೊದಲ ಅನುಭವಗಳ ಮೇಲೆ ಆಧರಿತವಾದ ಸವಾಲುಗಳನ್ನು ಗಮನದಲ್ಲಿರಿಸಿಕೊಳ್ಳಬೇಕು. ಸಾಮಾನ್ಯವಾಗಿ ಎದುರಿಸುವಂತಹ ಸವಾಲುಗಳು:

i. ದೀರ್ಘ ಕಾಲಾವಧಿಯಲ್ಲಿ ಅಭಿವೃದ್ಧಿಯ ಹಂಚಿಕೊಳ್ಳುವ ದೃಷ್ಟಿಕೋನವನ್ನು ಅಭಿವೃದ್ಧಿಪಡಿಸುವಲ್ಲಿ ಅಸಾಮರ್ಥ್ಯತೆ

ii. ಸಮುದಾಯದ ನಿಜವಾದ ಅಗತ್ಯತೆಗಳು ಮತ್ತು ಒದಗಿಸಲಾದ ಅಭಿವೃದ್ಧಿಯ ಅಂಶಗಳ ನಡುವಿನ ಅಂತರ

iii. ಸಮಾಜದಲ್ಲಿನ ಎಲ್ಲಾ ವರ್ಗಗಳ ವಿಶೇಷವಾಗಿ ಕಡೆಗಣಿಸಲ್ಪಟ್ಟ ಹಾಗೂ ವಯಸ್ಸಾದವರ ಭಾಗವಹಿಸುವಿಕೆಯ ಕೊರೆತ

iv. ಸಾಮಾಜಿಕ ಅಂಶಗಳು ಮತ್ತು ಸುಸ್ಥಿರ ಫಲಿತಾಂಶಗಳನ್ನು ಕಡೆಗಣಿಸಿ ಮೂಲಸೌಕರ್ಯಗಳು ಮತ್ತು ವೆಚ್ಚಗಳ ಕಡೆಗೆ ಗಮನ ಕೇಂದ್ರೀಕರಿಸುವುದು

v. ಸರ್ಕಾರದ ಅನುದಾನಗಳ ಮೇಲೆಯೇ ಅವಲಂಬಿತವಾಗಿದ್ದು, ಸಮುದಾಯದ ಕೊಡುಗೆಗಳು ಮತ್ತು ಸ್ವಸಹಾಯದ ಮೇಲೆ ಅವಲಂಬಿತವಾಗದಿರುವುದು

vi. ವಿವಿಧ ಯೋಜನೆಗಳ ಜೈವಿಕ ಅಭಿಗಮನದ ಅನುಪಸ್ಥಿತಿ

vii. ಸ್ಥಳಗಳು ಮತ್ತು ಕುಟುಂಬಗಳಿಗೆ ಪ್ರಯೋಜನಗಳನ್ನು ಹಸ್ತಾಂತರಿಸುವಲ್ಲಿ ಕೈಗೊಳ್ಳುವ ನ್ಯಾಯಸಮ್ಮತವಲ್ಲದ ನಿರ್ಧಾರಗಳು ತಾರತಮ್ಯತೆಗೆ ಕಾರಣವಾಗುವುದು

viii. ರಾಜಕೀಯ ಪಕ್ಷಪಾತ – ಗ್ರಹಿಕೆ ಮತ್ತು ನೈಜತೆ

ix. ಸಮುದಾಯದ ವಿವಿಧ ವರ್ಗಗಳ ಸಾಮಾಜಿಕ ಸಾಂಸ್ಕೃತಿಕ ಮೌಲ್ಯಗಳನ್ನು ಕಡೆಗಣಿಸುವುದು

x. ಬಹುವಿಧದ ಪ್ರಬಲವಾದ ರಚನೆಗಳ ಅಸ್ತಿತ್ವ ಮತ್ತು ಸೌಹಾರ್ದಯುತ ಕಾರ್ಯವಿಧಾನ ವ್ಯವಸ್ಥೆಯ ಅನುಪಸ್ಥಿತಿ

xi. ತಕ್ಷಣದ ಲಾಭಕ್ಕೋಸ್ಕರ ಪರಿಸರದ ಕಾಳಜಿಯನ್ನು ನಿರ್ಲಕ್ಷಿಸುವುದು

xii. ಕುಡಿಯುವುದು, ವರದಕ್ಷಿಣೆ, ಜಾತೀಯತೆ, ಕೋಮುವಾದ ಮತ್ತು ಮಹಿಳೆಯರ ವಿರುದ್ಧ ತಾರತಮ್ಯ ಮುಂತಾದ ಸಾಮಾಜಿಕ ಅನಿಷ್ಟಗಳ ವ್ಯಾಪಕತೆ

6. ವಿಧಾನ

ಈ ಗುರಿಗಳನ್ನು ತಲುಪಲು ಸಂಸದ್ ಆದರ್ಶ ಗ್ರಾಮ ಯೋಜನೆಯು ಈ ಕೆಳಗಿನ ವಿಧಾನಗಳನ್ನು ಅನುಸರಿಸಬೇಕಾಗಿದೆ:

i. ಸಂಸದರ ನಾಯಕತ್ವ, ಸಾಮರ್ಥ್ಯ, ಬದ್ಧತೆ, ಮತ್ತು ಶಕ್ತಿಯನ್ನು ಉತ್ತಮಗೊಳಿಸುವುದರ ಮೂಲಕ ಆದರ್ಶ ಗ್ರಾಮ ಪಂಚಾಯತ್‌ಗಳ ಅಭಿವೃದ್ಧಿ.

ii. ಸ್ಥಳೀಯ ಮಟ್ಟದ ಅಭಿವೃದ್ಧಿಗಾಗಿ ಸಮುದಾಯವನ್ನು ಒಗ್ಗೂಡಿಸುವುದು ಮತ್ತು ತೊಡಗಿಸಿಕೊಳ್ಳುವುದು

iii. ಜನರ ಆಕಾಂಕ್ಷೆ ಮತ್ತು ಸ್ಥಳೀಯ ಸಾಮರ್ಥ್ಯಕ್ಕೆ ಅನುಸಾರವಾಗಿ ಸಮಗ್ರ ಅಭವೃದ್ಧಿಯನ್ನು ಸಾಧಿಸಲು ಸರ್ಕಾರಿ ಕಾರ್ಯಕ್ರಮಗಳು, ಖಾಸಗಿ ಮತ್ತು ಸ್ವಯಂಪ್ರೇರಿತ ಉಪಕ್ರಮಗಳನ್ನು ಒಗ್ಗೂಡಿಸುವುದು.

iv. ಸ್ವಯಂಸೇವಾ ಸಂಸ್ಥೆಗಳು, ಸಹಕಾರಿ, ಶೈಕಣಿಕ ಮತ್ತು ಸಂಶೋಧನಾ ಸಂಸ್ಥೆಗಳೊಂದಿಗೆ ಸಹಭಾಗಿತ್ವವನ್ನು ಬೆಳೆಸುವುದು.


v. ಫಲಿತಾಂಶಗಳು ಮತ್ತು ಸಮರ್ಥನೀಯತೆಯನ್ನು ಕೇಂದ್ರೀಕರಿಸುವುದು.

ಸಂಸದರ ನಾಯಕತ್ವ, ಸಾಮರ್ಥ್ಯ, ಬದ್ಧತೆ, ಮತ್ತು ಶಕ್ತಿಯನ್ನು ಉತ್ತಮಗೊಳಿಸುವುದರ ಮೂಲಕ ಆದರ್ಶ ಗ್ರಾಮ ಪಂಚಾಯತ್‌ಗಳ ಅಭಿವೃದ್ಧಿ.

7. ಆದರ್ಶ ಗ್ರಾಮದಲ್ಲಿನ ಚಟುವಟಿಕೆಗಳು

ಒಂದು ಆದರ್ಶ ಗ್ರಾಮದ ವಿಕಸನವು ಜನರ ಹಂಚಿಕೆಯ ದೃಷ್ಟಿಕೋನ ಮತ್ತು ಅವರ ಸಾಮರ್ಥ್ಯಗಳನ್ನು ಬೆಳೆಸಿಕೊಂಡು ಹಾಗೂ ಲಭ್ಯವಿರುವ ಸಂಪನ್ಮೂಲಗಳನ್ನು ಸಾಧ್ಯವಾದಷ್ಟರ ಮಟ್ಟಿಗೆ ಬಳಸಿಕೊಳ್ಳಬೇಕು. ಈ ಪ್ರಕ್ರಿಯೆಯು ಸಂಸದರು, ಗ್ರಾಮ ಪಂಚಾಯತ್, ನಾಗರೀಕ ಸಮಾಜ ಮತ್ತು ಸರ್ಕಾರೀ ವ್ಯವಸ್ಥೆಯ ಮೂಲಕ ಹಾದುಹೋಗುವುದು. ಒಂದು ಆದರ್ಶ ಗ್ರಾಮದ ಅಂಶಗಳು ಸ್ವಾಭಾವಿಕವಾಗಿ ಸಂದರ್ಭಕ್ಕೆ ಅನುಗುಣವಾಗಿದ್ದರೂ ಪ್ರಮುಖ ಚಟುವಟಿಕೆಗಳನ್ನು ಸ್ಥೂಲವಾಗಿ ಗುರುತಿಸಲುಸಾಧ್ಯ. ಅವುಗಳೆಂದರೆ

ಸಂಸದ್ ಆದರ್ಶ ಗ್ರಾಮ ಯೋಜನೆಯ ಮೂಲಕ ಸರ್ವಾಂಗೀಣ ಅಭಿವೃದ್ಧಿ



a) ವೈಯುಕ್ತಿಕ ಅಭಿವೃದ್ಧಿ

i. ಆರೋಗ್ಯಕರ ನಡವಳಿಕೆ ಮತ್ತು ಆಚರಣೆಗಳನ್ನು ಉತ್ತೇಜಿಸುವುದು

ii. ದೈನಂದಿನ ವ್ಯಾಯಾಮಗಳು ಮತ್ತು ಆಟೋಟಗಳನ್ನೊಳಗೂಡಿ ಆರೋಗ್ಯಕರ ಅಭ್ಯಾಸಗಳನ್ನು ಬೆಳೆಸುವುದು

iii. ಮದ್ಯಪಾನ, ಧೂಮಪಾನ, ಮಾದಕ ವಸ್ತುಗಳ ಸೇವನೆ ಇತ್ಯಾದಿಗಳಿಂದ ಉಂಟಾಗುವ ಅಪಾಯಗಳನ್ನು ಕಡಿಮೆ ಮಾಡುವುದು

b) ಮನೋ ಬೆಳವಣಿಗೆ

i. ಹೆಲ್ತ್ ಕಾರ್ಡ್, ವೈದ್ಯಕೀಯ ಪರೀಕ್ಷೆಯನ್ನು ಒಳಗೊಂಡಂತೆ ಮೂಲಭೂತ ಆರೋಗ್ಯ ಸೌಲಭ್ಯಗಳ ಲಭ್ಯತೆ

ii. ಸಾರ್ವತ್ರಿಕ ಲಸಿಕೆ

iii. ಲಿಂಗ ಅನುಪಾತವನ್ನು ಸರಿದೂಗಿಸುವುದು

iv. 100% ಸಾಂಸ್ಥಿಕ ವಿತರಣೆ

v. ವಿಶೇಷವಾಗಿ ಮಕ್ಕಳು, ಹದಿಹರೆಯದ ಹುಡುಗಿಯರು, ಗರ್ಭಿಣಿಯರು ಮತ್ತು ಹಾಲುಣಿಸುವ ತಾಯಂದಿರ ಹಾಗೂ ಎಲ್ಲರ ಪೌಷ್ಠಿಕ ಸ್ಥಿತಿಯ ಸುಧಾರಣೆ

vi. ವಿಶೇಷ ಅಗತ್ಯವುಳ್ಳ ವಿಕಲಾಂಗ ವ್ಯಕ್ತಿಗಳು ಮುಖ್ಯವಾಗಿ ಮಕ್ಕಳು ಮತ್ತು ಮಹಿಳೆಯರ ಬಗ್ಗೆ ಪ್ರಬಲವಾಗಿ ಗಮನ ಕೇಂದ್ರೀಕರಿಸುವುದು

vii. ಹತ್ತನೇ ತರಗತಿಯವರೆಗಿನ ಶಿಕ್ಷಣ ಸೌಲಭ್ಯಗಳಿಗೆ ಸಾರ್ವತ್ರಿಕವಾಗಿ ಅನುವು ಮಾಡಿಕೊಡುವುದು ಮತ್ತು ಉಳಿಸಿಕೊಳ್ಳುವುದು

viii. ಶಾಲೆಗಳನ್ನು ಸ್ಮಾರ್ಟ್ ಶಾಲೆಗಳಾಗಿ ಪರಿವರ್ತಿಸುವುದು ಹಾಗೂ ಇವುಗಳು ಮಾಹಿತಿ ತಂತ್ರಜ್ಞಾನ ಆಧಾರಿತ ತರಗತಿ ಕೊಠಡಿಗಳನ್ನು, ಈ-ಗ್ರಂಥಾಲಯಗಳನ್ನು, ಅಂತರ್ಜಾಲ ಆಧಾರಿತ ಬೋಧನಾ ಕ್ರಮಗಳನ್ನು ಹೊಂದಿದ್ದು ಗುಣಮಟ್ಟದ ಶಿಕ್ಷಣಕ್ಕಾಗಿ ಎಲ್ಲಾ ವಿದ್ಯಾರ್ಥಿಗಳನ್ನು ಈ-ಸಾಕ್ಷರರನ್ನಾಗಿಸುವುದು

ix. ವಯಸ್ಕರ ಸಾಕ್ಷರತೆ

x. ಈ-ಸಾಕ್ಷರತೆ

xi. ಈ-ಗ್ರಂಥಾಲಯಗಳನ್ನು ಹೊಂದಿರುವ ಗ್ರಾಮದ ಗ್ರಂಥಾಲಯಗಳು

c) ಸಾಮಾಜಿಕ ಬೆಳವಣಿಗೆ

i. ಸ್ವಯಂಸೇವೆಯನ್ನು ಪ್ರೋತ್ಸಾಹಿಸಲು ಭಾರತ್ ನಿರ್ಮಾಣ್ ಸ್ವಯಂಸೇವಕರಂತಹವರನ್ನು ಪ್ರೋತ್ಸಾಹಿಸಲು ಚಟುವಟಿಕೆಗಳು

ii. ಸ್ಥಳೀಯ ಅಭಿವೃದ್ಧಿಗಾಗಿ ಸಂಪೂರ್ಣವಾದ ಭಾಗವಹಿಸುವಿಕೆ ಮತ್ತು ಕೊಡುಗೆಗಾಗಿ ಜನರ ಸಾಮರ್ಥ್ಯವನ್ನು ಬೆಳೆಸುವುದು

iii. ಗ್ರಾಮದ ಹಿರಿಯರನ್ನು, ಸ್ಥಳೀಯ ಅದರಲ್ಲೂ ಮುಖ್ಯವಾಗಿ ಮಹಿಳಾ ಮಾದರಿ ವ್ಯಕ್ತಿಗಳು, ಸ್ವಾತಂತ್ರ್ಯ ಹೋರಾಟಗಾರರು ಮತ್ತು ಹುತಾತ್ಮರನ್ನು ಗೌರವಿಸುವ ಚಟುವಟಿಕೆಗಳು

iv. ಹಿಂಸೆ ಮತ್ತು ಅಪರಾಧ ಮುಕ್ತ ಗ್ರಾಮಗಳಿಗಾಗಿ ಈ ಕೆಳಗಿನ ಚಟುವಟಿಕೆಗಳನ್ನು ಕೈಗೊಳ್ಳುವುದು:

a) ನಾಗರೀಕ ಸಮಿತಿಗಳನ್ನು ರಚಿಸುವುದು

b) ವಿಶೇಷವಾಗಿ ಯುವಜನತೆಯನ್ನು ಸಂವೇದನಾಶೀಲರನ್ನಾಗಿಸುವುದು

v. ಗ್ರಾಮೀಣ ಕ್ರೀಡೆ ಮತ್ತು ಜಾನಪದ ಕಲಾ ಉತ್ಸವಗಳು

vi. ಜನರಲ್ಲಿ ಹೆಮ್ಮೆಯನ್ನು ಮೂಡಿಸುವ ಹಳ್ಳಿ ಹಾಡು

vii. "ಗ್ರಾಮ ದಿನವನ್ನು" ಆಚರಿಸುವುದು

viii. ಸಾಮಾಜಿಕವಾಗಿ ಬಹಿಷ್ಕರಿಸಲ್ಪಟ್ಟ ಅದರಲ್ಲೂ ಮುಖ್ಯವಾಗಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ಸೇರ್ಪಡೆ ಮತ್ತು ಏಕೀಕರಣಕ್ಕಾಗಿ ಕ್ರಿಯಾಶೀಲ ಕ್ರಮಗಳನ್ನು ಕೈಗೊಳ್ಳುವುದು

d) ಆರ್ಥಿಕ ಅಭಿವೃದ್ಧಿ

i) ಜಾನುವಾರು ಮತ್ತು ತೋಟಗಾರಿಕೆಯನ್ನು ಒಳಗೊಂಡ ಜೀವನೋಪಾಯದ ಚಟುವಟಿಕೆಗಳು ಮತ್ತು ವೈವಿಧ್ಯಮಯ ಕೃಷಿಯನ್ನು ಉತ್ತೇಜಿಸುವುದು, ಅವುಗಳೆಂದರೆ –

a) ಸಾವಯವ ಕೃಷಿ

b) ಮಣ್ಣಿನ ಆರೋಗ್ಯ ಚೀಟಿಗಳು

c) ಎಸ್‌ಆರ್‌ಐಯಂತಹ ಬೆಳೆ ಹೆಚ್ಚಿಸುವಂತಹ ಕ್ರಮಗಳು

d) ಬೀಜ ಬ್ಯಾಂಕ್‌ಗಳನ್ನು ಹುಟ್ಟು ಹಾಕುವುದು

e) ಹಸುಗಳ ವಸತಿ ನಿಲಯ, ಗೋಬರ್ ಬ್ಯಾಂಕ್ ಸೇರಿದಂತೆ ಜಾನುವಾರುಗಳ ಅಭಿವೃದ್ಧಿ, ಮರಗಳನ್ನು ಹೊರತುಪಡಿಸಿದ ಇತರ ಅರಣ್ಯ ಉತ್ಪನ್ನಗಳ ಸಂಕಲನ ಮತ್ತು ಮೌಲ್ಯ ವೃದ್ಧಿ

10. ಯೋಜನೆ

ಗ್ರಾಮ ಅಭಿವೃದ್ಧಿ ಯೋಜನೆಯು ಗುರುತಿಸಲ್ಪಟ್ಟಿರುವ ಪ್ರತಿ ಗ್ರಾಮ ಪಂಚಾಯತಿಯಲ್ಲಿನ ಎಲ್ಲಾ ಕುಟುಂಬವು ಬಡತನದಿಂದ ಮೇಲೆ ಬರುವಂತೆ ವಿಶೇಷ ಒತ್ತನ್ನು ನೀಡಿ ತಯಾರಿಸಬೇಕಾಗುತ್ತದೆ.

ಯೋಜನಾ ಪ್ರಕ್ರಿಯೆ ಪ್ರಾರಂಭಿಸುವ ಪೂರ್ವದಲ್ಲಿ, ಸಂಸದ ಸದಸ್ಯರುಗಳು ಸ್ವತಃ ತಮ್ಮ ಮುಂದಾಳತ್ವದಲ್ಲಿ ವ್ಯವಸ್ಥಿತವಾಗಿ ಸಮುದಾಯ ಕ್ರೋಢಿಕರಣ ಮತ್ತು ಪೂರಕ ವಾತಾವರಣವನ್ನು ನಿರ್ಮಿಸಿಕೊಳ್ಳಬೇಕು. ಈ ಪ್ರಕ್ರಿಯೆಯಲ್ಲಿ ಗ್ರಾಮ ಪಂಚಾಯಿತಿಯು ಪೂರ್ಣ ಪ್ರಮಾಣದಲ್ಲಿ ತೊಡಗಿಸಿಕೊಳ್ಳಬೇಕು. ಪರಿಗಣಿಸಬಹುದಾದ ಕೆಲವೊಂದು ಚಟುವಟಿಕೆಗಳು ಈ ಕೆಳಗಿನಂತಿವೆ:

a. ಗ್ರಾಮ ಸಭೆ, ಮಹಿಳೆಯರು ಮತ್ತು ಮಕ್ಕಳೊಂದಿಗೆ ಚರ್ಚಿಸುವುದು

b. ಕಾರ್ಯಕಾರಿ ಗುಂಪುಗಳು ಮತ್ತು ಯುವಕ ಮಂಡಳಿಗಳನ್ನು ಒಳಗೊಂಡಂತೆ ಸ್ಥಳೀಯ ಸಂಸ್ಥೆಗಳೊಂದಿಗೆ ಚರ್ಚಿಸುವುದು

c. ಸಾಂಸ್ಕೃತಿಕ ಮತ್ತು ಕ್ರೀಡಾ ಚಟುವಟಿಕೆಗಳನ್ನು ಆಯೋಜಿಸುವುದು

d. ಗೋಡೆ ಬರಹ, ಶಿಬಿರಗಳು, ಪಾದಯಾತ್ರೆಗಳು ಮತ್ತು ಬೀದಿ ನಾಟಕ ಮುಂತಾದವುಗಳನ್ನು ಆಯೋಜಿಸುವುದು

e. ಮಾದರಿ ಗ್ರಾಮದ ಕಲ್ಪನೆಯ ಕುರಿತು ಚಿತ್ರಕಲಾ ಮತ್ತು ಪ್ರಬಂಧ ಸ್ಪರ್ಧೆಯನ್ನು ಆಯೋಜಿಸುವುದು

f. ಗ್ರಾಮಾಭಿವೃದ್ಧಿಗೆ ಪೂರಕವಾಗಿ ಯಶೋಗಾಥೆಗಳ ಕಿರುಚಿತ್ರಗಳನ್ನು ಪ್ರದರ್ಶಿಸುವುದು

ಈ ಚಟುವಟಿಕೆಗಳು ಗ್ರಾಮದ ಅಭಿವೃದ್ಧಿ ಕುರಿತು ಗ್ರಾಮಸ್ಥರ ಉತ್ಸಾಹ ಮತ್ತು ಸಂಘಟಿತವಾದಂತಹ ವಿಶಾಲವಾದ ಜನರ ದೂರದೃಷ್ಟಿಯನ್ನು ಕಂಡುಕೊಳ್ಳಲು ಸಹಕಾರಿಯಾಗುವುದು. ಇದರ ನಂತರ ಸಂಸದರು ಮತ್ತು ಗ್ರಾಮ ಪಂಚಾಯತಿಯ ಮುಂದಾಳತ್ವದಲ್ಲಿ ಸಹಭಾಗಿತ್ವ ಯೋಜನೆ ತಯಾರಿ ಪ್ರಕ್ರಿಯೆಯನ್ನು ಎರಡು ಹಂತದಲ್ಲಿ ನಡೆಸಬೇಕು ಹಾಗೂ ಈ ಪ್ರಕ್ರಿಯೆಗೆ ಪೂರಕವಾಗಿ ಅವಶ್ಯವಿರುವ ವೃತ್ತಿಪರ ಕೌಶಲ್ಯ ಮತ್ತು ಸಮನ್ವಯತೆಯ ಸಹಕಾರ ಮತ್ತು ಬೆಂಬಲವನ್ನು ಜಿಲ್ಲಾಧಿಕಾರಿಗಳು ಒದಗಿಸಬೇಕು.

ಮೊದಲ ಹಂತದಲ್ಲಿ, ಜನರೇ ಸ್ವಯಂ ಪ್ರೇರಿತವಾಗಿ ಅನುಷ್ಠಾನ ಮಾಡಬಹುದಾದಂತಹ ಚಟುವಟಿಕೆಗಳಾದ ಮನೋಭಾವ ಬದಲಾವಣೆ ಮತ್ತು ಸಾಮಾಜಿಕ ಬದಲಾವಣೆಗಾಗಿ ಸ್ವ – ಸಹಾಯ ಮತ್ತು ಪರಸ್ಪರ ಸಹಾಯ, ಶ್ರಮಧಾನ, ಸ್ಥಳೀಯವಾಗಿ ಕೊಡುಗೆಗಳು ಮತ್ತು ಲಭ್ಯವಿರುವ ಸ್ಥಳೀಯ ಸಂಪನ್ಮೂಲಗಳನ್ನು ಗುರುತಿಸುವುದು. ಈ ಕೆಳಗಿನ ಚಟುವಟಿಕೆಗಳನ್ನು ಒಳಗೊಂಡಿರುತ್ತದೆ:

a. ಗ್ರಾಮದಲ್ಲಿನ ಪ್ರತಿಯೊಂದು ಕುಟುಂಬವು ಆರ್ಥಿಕವಾಗಿ ಬಡತನ ರೇಖೆಯಿಂದ ನಿಗಧಿತ ಸಮಯದೊಳಗೆ ಮೇಲೆ ಬರಲು ಪೂರಕವಾಗಿ ಸಮುದಾಯವು ಕಾರ್ಯನಿರ್ವಹಿಸುವಂತೆ ಸಂಘಟಿತವಾಗಿ ಸಮುದಾಯ ಜನಪ್ರತಿನಿಧಿಗಳು ಹಾಗೂ ಸರ್ಕಾರಿ ಅಧಿಕಾರಿಗಳನ್ನು ಒಳಗೊಂಡಂತೆ ಪ್ರತಿಜ್ಞೆಯನ್ನು ತೆಗೆದುಕೊಳ್ಳಬೇಕು.

b. ಭಾರತೀಯ ಸಂವಿಧಾನದ ಪ್ರಕಾರ ಮೂಲಭೂತ ಹಕ್ಕುಗಳು ಮತ್ತು ಜವಾಬ್ದಾರಿಗಳನ್ನು ಸಂಘಟಿತವಾಗಿ ಓದುವುದು ಮತ್ತು ಅರ್ಥೈಸಿಕೊಳ್ಳುವುದು.

c. ಆರೋಗ್ಯ ಶಿಬಿರಗಳನ್ನು ಆಯೋಜಿಸುವುದು

d. ಸ್ವಚ್ಚತಾ ಚಟುವಟಿಕೆಗಳನ್ನು ಆಯೋಜಿಸುವುದು

e. ಪಶುಸಂಗೋಪನಾ ಆರೋಗ್ಯ ಶಿಬಿರಗಳನ್ನು ನಡೆಸುವುದು

f. ಅಂಗನವಾಡಿ ಕೇಂದ್ರಗಳಲ್ಲಿ ಮಕ್ಕಳ ಹಾಜರಾತಿಯನ್ನು ಉತ್ತಮಪಡಿಸಲು ಮತ್ತು ಗುಣಮಟ್ಟದ ಸೇವೆಗಳನ್ನು ಒದಗಿಸಲು ಮಧ್ಯಸ್ಥಿಕೆಯನ್ನು ವಹಿಸುವುದು

g. ಸ್ಥಳೀಯ ಶಾಲೆಗಳಲ್ಲಿ ಪೋಷಕರು ಮತ್ತು ಶಿಕ್ಷಕರ ಸಹಯೋಗದೊಂದಿಗೆ (ಪಿಟಿಎ) ಮಕ್ಕಳ ಹಾಜರಾತಿ, ಗುಣಮಟ್ಟದ ಶಿಕ್ಷಣವನ್ನು ಮತ್ತು ಮಧ್ಯಾನದ ಬಿಸಿಊಟದ ಗುಣಮಟ್ಟವನ್ನು ಉತ್ತುಮಪಡಿಸಲು ಮಧ್ಯಸ್ಥಿಕೆಯನ್ನು ವಹಿಸುವುದು

h. ಸಸಿಗಳನ್ನು ನೆಡುವುದು

i. ಸ್ವ ಸಹಾಯ ಸಂಘಗಳನ್ನು ಬಲಪಡಿಸುವುದು/ರಚಿಸುವುದು

j. ಮಹಾತ್ಮ ಗಾಂಧಿ ಎನ್‌ಆರ್‌ಇಜಿ ಯೋಜನೆಯಡಿ ರೋಜ್‌ಗಾರ್ ದಿವಸವನ್ನು ಆಯೋಜಿಸುವುದು

k. ನ್ಯಾಯಬೆಲೆ ಅಂಗಡಿಗಳನ್ನು ಉತ್ತಮಪಡಿಸುವುದು

l. ಕುಂದು ಕೊರತೆಗಳನ್ನು ನಿವಾರಿಸಲು ಜಿಲ್ಲಾಧಿಕಾರಿಗಳು ಮತ್ತು ಜಿಲ್ಲೆಯ ಪ್ರಮುಖ ಇಲಾಖೆಯ ಅಧಿಕಾರಿಗಳು ವಿಶೇಷವಾಗಿ ನಾಗರೀಕ ಸರಬರಾಜು, ಸಮಾಜ ಕಲ್ಯಾಣ, ಭೂ ಕಂದಾಯ ಇಲಾಖೆ ಮುಂತಾದವರುಗಳೊಂದಿಗೆ ಶಿಬಿರಗಳನ್ನು ಆಯೋಜಿಸುವುದು

ಈ ಹಂತದಲ್ಲಿ, ಎಲ್ಲಾ ವರ್ಗಗಳಿಗೆ ವಿಶೇಷವಾಗಿ ವೈಯಕ್ತಿಕ, ಮಾನವ, ಸಾಮಾಜಿಕ ಮತ್ತು ಪರಿಸರಗಳ ಅಭಿವೃದ್ಧಿಗೆ ಹಾಗೂ ಉತ್ತಮ ಆಡಳಿತವನ್ನು ನೀಡುವ ನಿಟ್ಟಿನಲ್ಲಿ ಸಾಧ್ಯವಾಗುವಂತಹ ಎಲ್ಲಾ ಚಟುವಟಿಕೆಗಳನ್ನು ಕೈಗೊಳ್ಳಬೇಕು. ಸಮಾನಾಂತರವಾಗಿ ಎರಡನೇ ಹಂತದ ಮೊದಲ ಹೆಜ್ಜೆಯಾದ ಪರಿಸ್ಥಿತಿಯ ವಿಶ್ಲೇಷಣೆಯನ್ನು ನಡೆಸಬೇಕು.

ಈ ಚಟುವಟಿಕೆಗಳ ಮೂಲಕ, ಗ್ರಾಮದ ಸಮುದಾಯವು ಮುಂದಿನ ಹಂತದಲ್ಲಿ ಅನುಷ್ಠಾನಗೊಳಿಸಬಹುದಾದಂತಹ ಯೋಜನೆಗಳನ್ನು ಮನಃಪೂರ್ವಕವಾಗಿ ಕೈಗೆತ್ತಿಕೊಳ್ಳುವುದರ ಕುರಿತು ಪ್ರಾತ್ಯಕ್ಷಿತೆಯನ್ನು ನೀಡಬೇಕು.

ನಂತರದಲ್ಲಿ ಯೋಜನಾ ಪ್ರಕ್ರಿಯೆಯ ಎರಡನೇ ಹಂತವು ಈ ಕೆಳಕಂಡ ಹಂತಗಳಲ್ಲಿ ಮುಂದುವರೆಯಬೇಕು:

1. ಪರಿಸ್ಥಿತಿಯ ವಿಶ್ಲೇಷಣೆ:

ಈ ಪ್ರಕ್ರಿಯೆಯನ್ನು ಮೊದಲ ಹಂತದಲ್ಲಿಯೇ ಇನ್ನಿತರ ಚಟುವಟಿಕೆಗಳೊಂದಿಗೆ ಪ್ರಾರಂಭ ಮಾಡಿರಬೇಕು

i. **ಪ್ರಾಥಮಿಕ ಸಮೀಕ್ಷೆ:** ಇದು ಎರಡು ಉದ್ದೇಶಗಳನ್ನು ಒಳಗೊಂಡಿರುತ್ತದೆ; ಮೊದಲನೆಯದಾಗಿ, ಪ್ರಸ್ತುತದಲ್ಲಿ ವಿವಿಧ ವಲಯಗಳ ಅಭಿವೃದ್ಧಿಗೆ ಸಂಬಂಧಿಸಿದಂತೆ ಮಾಹಿತಿಗಳನ್ನು ಸಂಗ್ರಹಿಸಿ ಸೂಕ್ತವಾಗಿ ಉತ್ತಮಪಡಿಸಲು ನಿರ್ದಿಷ್ಟಪಡಿಸುವುದು. ಎರಡನೆಯದಾಗಿ, ಮೂಲಭೂತ


ಸೌಕರ್ಯಗಳು ಮತ್ತು ಸೇವೆಗಳು ಹಾಗೂ ಭವಿಷ್ಯದ ಆರ್ಥಿಕ ಮತ್ತು ಮಾನವ ಅಭಿವೃದ್ಧಿಗೆ ಪೂರಕವಾಗಿ ಕೊರತೆಗಳು ಮತ್ತು ಅಂತರದ ಕುರಿತು ಪ್ರಾಥಮಿಕ ಮಾಹಿತಿಯನ್ನು ಒದಗಿಸುವುದು. ಈ ಪ್ರಕ್ರಿಯೆಯನ್ನು ನುರಿತ ತಜ್ಞ ಸಂಸ್ಥೆ / ಏಜೆನ್ಸಿಯ ಮೂಲಕ ನಡೆಸಲು ಒತ್ತನ್ನು ನೀಡಬೇಕು. ಇದಕ್ಕೆ ಬದಲಿಯಾಗಿ, ಶೈಕ್ಷಣಿಕ ಸಂಸ್ಥೆಗಳು ಅಥವಾ ನುರಿತ ಪರಿಣಿತರ ಗುಂಪುಗಳಿಗೆ ವಹಿಸಬೇಕು. ಪ್ರಾಥಮಿಕ ಸಮೀಕ್ಷೆಯನ್ನು ನಡೆಸಲು ಪೂರಕವಾದಂತಹ ಅಳತೆ ಗೋಲುಗಳನ್ನು ಅನುಬಂಧ-II ರಲ್ಲಿ ನೀಡಲಾಗಿದೆ. ಸ್ಥಳೀಯ ಪ್ರದೇಶಗಳಿಗೆ ಅನುಗುಣವಾಗಿ ಅವಶ್ಯವಿರುವ ಅಂಶಗಳನ್ನು ಸೇರಿಸಬಹುದು.

ii. ಸಹಭಾಗಿತ್ವದೊಂದಿಗೆ ಪರಿಸ್ಥಿತಿಯನ್ನು ವಿಶ್ಲೇಷಿಸುವುದು: ಈ ಪ್ರಕ್ರಿಯೆಯನ್ನು ಸ್ಥಳೀಯ ಸಮುದಾಯವನ್ನು ಪಾಲ್ಗೊಳ್ಳುವಂತೆ ಮಾಡುವುದರ ಮೂಲಕ ತರಬೇತಿ ಪಡೆದ ಸುಗಮಕಾರರುಗಳು ಸಿದ್ಧಪಡಿಸಬೇಕು. ತರಬೇತಿಯನ್ನು ಎನ್‌ಐಆರ್‌ಡಿ ಮತ್ತು ಪಿಆರ್ ರವರು ಆಯೋಜಿಸಬೇಕು. ಈ ಕೆಳಗಿನ ಸಹಭಾಗಿತ್ವ ಯೋಜನೆಯ ತಂತ್ರಗಳನ್ನು ಬಳಸಬೇಕು:

- **ಸಾಮಾಜಿಕ ನಕ್ಷೆ:** ಈ ನಕ್ಷೆಯನ್ನು ಸ್ಥಳೀಯ ವ್ಯಕ್ತಿಗಳು ವಿಶೇಷವಾಗಿ ಮಹಿಳೆಯರು ಬಿಡಿಸಬೇಕು ಹಾಗೂ ಇದರಲ್ಲಿ ವಿವಿಧ ವರ್ಗಗಳಿಗೆ ಅನುಗುಣವಾಗಿ ಕುಟುಂಬಗಳು, ಪ್ರಮುಖ ಸಂಸ್ಥೆಗಳು, ಭೌತಿಕ ಮತ್ತು ಸಾಮಾಜಿಕ ಮೂಲಭೂತ ಸೌಕರ್ಯಗಳು ಹಾಗೂ ಸೇವೆಗಳನ್ನು ಗುರುತಿಸಬೇಕು.



- **ಸಂಪನ್ಮೂಲ ನಕ್ಷೆ:** ಗ್ರಾಮದ ವ್ಯಾಪ್ತಿಯಲ್ಲಿ ಲಭ್ಯವಿರುವ ನೈಸರ್ಗಿಕ ಮತ್ತು ಭೌತಿಕ ಸಂಪನ್ಮೂಲಗಳನ್ನು ಅರ್ಥೈಸಿಕೊಳ್ಳಲು ಸಹಕಾರಿಯಾಗುವುದು. ಈ ನಕ್ಷೆಯನ್ನು ಸಹ ಸ್ಥಳೀಯ ಗ್ರಾಮಸ್ಥರೆ ರಚಿಸಬೇಕು ಹಾಗೂ ಕೆಳಕಂಡ ಅಂಶಗಳನ್ನು ಒಳಗೊಂಡಿರಬೇಕು:
  - ಭೂ ಪ್ರದೇಶದ ಬಳಕೆ
  - ನೀರಿನ ಮೂಲಗಳು
  - ನೀರಾವರಿ ಕಾಲುವೆಗಳು
  - ಭೌತಿಕ ನಕ್ಷೆಯು ಭೂ ಪ್ರದೇಶದ ಇಳಿಜಾರು, ಅಸಮತೋಲನ ಮತ್ತು ಚರಂಡಿಗಳ ವಿನ್ಯಾಸ ಮುಂತಾದವುಗಳನ್ನು ಒಳಗೊಂಡಿರಬೇಕು



ಸಂಪನ್ಮೂಲ ನಕ್ಷೆಯು ಕಿರು ಜಲಾನಯನ ಅಭಿವೃದ್ಧಿ ಪ್ರದೇಶಗಳನ್ನು ಮತ್ತು ಕೃಷಿ ಅಭಿವೃದ್ಧಿಗೆ ಪೂರಕವಾಗಿರುವ ಭೂ ಪ್ರದೇಶ ಮತ್ತು ನೈಸರ್ಗಿಕ ಸಂಪನ್ಮೂಲಗಳ ನಿರ್ವಹಣೆಯನ್ನು ಗುರುತಿಸಲು ಸಹಕಾರಿಯಾಗುವುದು.

- **ಕೋಷ್ಟಕದ ಅವಶ್ಯಕತೆ:** ಗ್ರಾಮದ ಕ್ರೋಢೀಕೃತ ಅವಶ್ಯಕತೆ ಮತ್ತು ಅವುಗಳನ್ನು ಆದ್ಯತೀಕರಿಸಲು ಸ್ಥಳೀಯ ಕುಟುಂಬಗಳ ಭಾಗವಹಿಸುವಿಕೆಯಿಂದ ಸಿದ್ಧಪಡಿಸಬೇಕು.

ಪರಿಸ್ಥಿತಿ ವಿಶ್ಲೇಷಣೆಯ ಮಾಹಿತಿಯನ್ನು ಜಿಐಎಸ್ ಬಳಸುವ ಮೂಲಕ ಸಂಗ್ರಹಿಸಬೇಕು.

2. ಮೊದಲ ಹಂತದ ಪ್ರಗತಿಯನ್ನು ಪರಿಶೀಲಿಸುವುದು

ಈ ಚಟುವಟಿಕೆಯನ್ನು ಸಂಸದರು ಜಿಲ್ಲಾಧಿಕಾರಿಗಳು, ಗ್ರಾಮ ಪಂಚಾಯತಿ ಮತ್ತು ಸಮುದಾಯದೊಂದಿಗೆ ಜಂಟಿಯಾಗಿ ಮೊದಲ ಹಂತದ ಪ್ರಗತಿಯನ್ನು ತೀವ್ರತರವಾಗಿ ಪರಿಶೀಲಿಸಬೇಕು. ಇದು ಗ್ರಾಮವು ತನ್ನ ಸ್ವಂತ ಬಲದಿಂದ ಏನನ್ನು ಸಾಧಿಸಲು ಸಾಧ್ಯವಾಗಿದೆ ಮತ್ತು ಎಷ್ಟು ಸಮಯದೊಳಗೆ ಪೂರ್ಣಗೊಳಿಸಲು ಸಾಧ್ಯವೆಂಬುದನ್ನು ವಿಶ್ಲೇಷಿಸಬೇಕು.

ಈ ವಿಶ್ಲೇಷಣೆಯ ಆಧಾರದ ಮೇಲೆ, ಗ್ರಾಮವು ತಂತ್ರಗಳನ್ನು ಸ್ಪಷ್ಟಪಡಿಸಿಕೊಳ್ಳುವ ಮುಂದಿನ ಹಂತಕ್ಕೆ ಹೋಗಬಹುದು.

3. ತಂತ್ರಗಳನ್ನು ನಿರ್ದಿಷ್ಟಪಡಿಸಿಕೊಳ್ಳುವುದು:

ಮೊದಲ ಹಂತದ ಪ್ರಗತಿಯನ್ನು ಪರಿಶೀಲಿಸಿದ ನಂತರ, ಪ್ರಾಥಮಿಕ ಸಮೀಕ್ಷೆ ಮತ್ತು ಸಹಭಾಗಿತ್ವ ವಿಶ್ಲೇಷಣೆಯಲ್ಲಿ ಸಂಗ್ರಹಿಸಿದ ಮಾಹಿತಿಯ ಆಧಾರದ ಮೇಲೆ ಭಾಗೀದಾರರುಗಳು, ಅಧಿಕಾರಿಗಳು ಮತ್ತು ಪರಿಣಿತರ ಗುಂಪನ್ನು ಆಯ್ಕೆಮಾಡಿ ಅಭಿವೃದ್ಧಿಗೆ ಅವಶ್ಯವಿರುವ ತಂತ್ರಗಳು ಮತ್ತು ಕಾರ್ಯಗತಗೊಳಿಸಲು ಬೇಕಾಗುವ ಚಟುವಟಿಕೆಗಳನ್ನು ಸಲಹೆ ನೀಡಲು ತಿಳಿಸುವುದು. ಅಂದರೆ, ಅವಶ್ಯವಿರುವ ಯೋಜನೆ ಮತ್ತು ಕಾರ್ಯಕ್ರಮಗಳನ್ನು ಗುರುತಿಸುವುದು.

4. ಸಂಪನ್ಮೂಲಗಳ ಮೂಲಗಳನ್ನು ಗುರುತಿಸುವುದು:

ಲಭ್ಯವಿರುವ ಸಂಪನ್ಮೂಲಗಳನ್ನು ಅವಶ್ಯಕವಾಗಿ ಗುರುತಿಸಬೇಕು. ವಿಶಾಲವಾಗಿ ಈ ಕೆಳಗಿನಂತೆ ವರ್ಗೀಕರಿಸಬಹುದು:

i. ಕೇಂದ್ರ ಮತ್ತು ರಾಜ್ಯ ಸರ್ಕಾರ ಪ್ರಾಯೋಜಿತ ಯೋಜನೆಗಳ ನಿರ್ಬಂದಿತ ಸಂಪನ್ಮೂಲ – ಐಎವೈ, ಪಿಎಂಜಿಎಸ್‌ವೈ ಮುಂತಾದವುಗಳು

ii. ಭಾಗಶಃ ನಿರ್ಬಂಧಿತ ಮತ್ತು ಬಳಕೆಯಲ್ಲಿ ಪೂರ್ಣ ಸ್ವಾತಂತ್ರವಿರುವ ಸಂಪನ್ಮೂಲಗಳಾದ ಮಹಾತ್ಮ ಗಾಂಧಿ ಎನ್‌ಆರ್‌ಇಜಿಎಸ್, ಆರ್‌ಕೆವಿವೈ, ಎನ್‌ಆರ್‌ಎಲ್‌ಎಂ, ಎನ್‌ಹೆಚ್‌ಎಂ, ಎಸ್‌ಎಸ್‌ಎ ಮುಂತಾದವು.

iii. ಬಳಕೆಗೆ ವಿಶಾಲವಾಗಿ ಲಭ್ಯವಿರುವ ಸಂಯುಕ್ತ ಸಂಪನ್ಮೂಲಗಳಾದ ಬಿಆರ್‌ಜಿಎಫ್, ಎಂಪಿಲ್ಯಾಡ್ಸ್ ಮುಂತಾದವುಗಳು ಪ್ರಮುಖವಾದ ಅಂತರಗಳನ್ನು ಕಡಿಮೆಗೊಳಿಸಲು ಬೇಕಾಗುತ್ತವೆ. ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಗಳನ್ನು ಸಹ ಅವರ ಒಪ್ಪಿಗೆ ಮೇರೆಗೆ ಬಳಸಿಕೊಳ್ಳಬಹುದು.

iv. ಗ್ರಾಮ ಪಂಚಾಯತಿಗಳ ಸಂಯುಕ್ತ ಸಂಪನ್ಮೂಲಗಳಾದ ಸ್ವಂತ ಸಂಪನ್ಮೂಲ, ಕೇಂದ್ರ ಮತ್ತು ರಾಜ್ಯ ಹಣಕಾಸು ಆಯೋಗದ ನಿಧಿಗಳು ಮುಂತಾದವು.

v. ಸ್ಥಳೀಯವಾಗಿ ಕ್ರೋಢಿಕರಿಸಬಹುದಾದ ಸಂಪನ್ಮೂಲಗಳಾದ ನಗದು, ವಸ್ತುಗಳು ಮತ್ತು ಶ್ರಮಿಕರು.

vi. ಸಿಎಸ್‌ಆರ್ ನಿಧಿಗಳು.

ಮೇಲೆ ವರ್ಗೀಕರಿಸಲ್ಪಟ್ಟ ಸಂಪನ್ಮೂಲಗಳನ್ನು ಒಗ್ಗೂಡಿಸುವಿಕೆ ಮತ್ತು ಸಮಗ್ರ ಯೋಜನೆಗಳನ್ನು ರೂಪಿಸುವುದರ ಮೂಲಕ ಹೆಚ್ಚಿನ ಹೊಂದಾಣಿಕೆಯನ್ನು ತರವುದು. ಆದರ್ಶ ಗ್ರಾಮಕ್ಕೆ ಆದ್ಯತೆಯನ್ನು ನೀಡಿ ಕೇಂದ್ರ ವಲಯ / ಕೇಂದ್ರ ಪ್ರಾಯೋಜಿತ ಕಾರ್ಯಕ್ರಮ / ಯೋಜನೆಗಳು, ಸಂಬಂಧಪಟ್ಟ ಸಚಿವಾಲಯ / ಇಲ್ಲಾಖೆಗಳು ಮಾರ್ಗಸೂಚಿಯಲ್ಲಿ ಸೂಕ್ತವಾದ ಬದಲಾವಣೆ ಮತ್ತು ಕ್ರಮಗಳನ್ನು ತೆಗೆದುಕೊಳ್ಳಬೇಕು.

5. ಅವಶ್ಯಕತೆಗಳನ್ನು ಅಂತಿಮಗೊಳಿಸುವುದು:

ಇದನ್ನು ಎರಡು ವಿಭಾಗಗಳಲ್ಲಿ ಮಾಡಬಹುದು: ಮೊದಲನೆ ವಿಭಾಗವು ವಿವಿಧ ಭಾಗೀದಾರರುಗಳೊಂದಿಗೆ ಸಲಹೆಯನ್ನು ಪಡೆದುಕೊಂಡು ವಿಶೇಷವಾಗಿ ಮಹಿಳಾ ಸ್ವ ಸಹಾಯ ಸಂಘಗಳು ಮತ್ತು ರೈತರ ಗುಂಪುಗಳು ಹಾಗೂ ಎರಡನೇ ವಿಭಾಗವು ಗ್ರಾಮ ಸಭೆಯಲ್ಲಿನ ಚರ್ಚೆಯಾಗಿರುತ್ತದೆ. ಈ ಒಂದು ಸಂದರ್ಭದಲ್ಲಿ, ಚಟುವಟಿಕೆಗಳಿಂದ ಬಂದಂತಹ ಫಲಿತಾಂಶಗಳ ಸಾರಾಂಶವನ್ನು ಸರಳವಾದ ಮತ್ತು ಸ್ಪಷ್ಟವಾಗಿ ಅವಶ್ಯಕತೆ ಮತ್ತು ಆದ್ಯತೆಗಳನ್ನು ನಿಯಮಗಳುನುಸಾರ ಮತ್ತು ಒಮ್ಮತದಿಂದ ಅಂತಿಮಗೊಳಿಸುವುದು.

6. ಕರಡು ಗ್ರಾಮ ಅಭಿವೃದ್ಧಿ ಯೋಜನೆಯನ್ನು (ವಿಡಿಪಿ) ತಯಾರಿಸುವುದು:

ಜನರ ಅವಶ್ಯಕತೆಗಳನ್ನು ಆದ್ಯತೀಕರಿಸಿದಂತೆ ಕರಡು ಗ್ರಾಮ ಅಭಿವೃದ್ಧಿ ಯೋಜನೆಯನ್ನು ಅಧಿಕಾರಿಗಳು ಮತ್ತು ವೃತ್ತಿಪರರು/ಪರಿಣಿತರನ್ನು ಒಳಗೊಂಡಂತೆ ಕಾರ್ಯಕಾರಿ ಗುಂಪನ್ನು ಜಿಲ್ಲಾಧಿಕಾರಿಗಳು ರಚಿಸುವುದು. ವಿಡಿಪಿಯು ಚಟುವಟಿಕೆಗಳು, ಕೊಡುಗೆಗಳು ಮತ್ತು ಮೊದಲ ಹಂತದ ಸಾಧನೆಗಳನ್ನು ಒಳಗೊಂಡಿರಬೇಕು. ಇದು ನಿರೀಕ್ಷಿತ ಕಾರ್ಯಕ್ರಮ ಮತ್ತು ಪರಿಣಾಮಗಳನ್ನು ಕಾಲಮಿತಿಯೊಂದಿಗೆ ನೀಡಬೇಕು.

7. ಗ್ರಾಮ ಸಭೆಯು ವಿಡಿಪಿಗೆ ಅನುಮೋಧನೆಯನ್ನು ನೀಡುವುದು:

ಕರಡು ವಿಡಿಪಿಯನ್ನು ಗ್ರಾಮ ಸಭೆಯಲ್ಲಿ ಚರ್ಚೆಗೆ ಮಂಡಿಸುವುದು ಮತ್ತು ಅನುಮತಿಯನ್ನು ಪಡೆದುಕೊಳ್ಳುವುದು.

8. ವಿಡಿಪಿಯ ಅನುಮೋಧನೆ:

ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಮಟ್ಟದ ಸಮಿತಿಯು ಸಂಸದರ ಪ್ರತಿಕಿಯೆಗಳು ಮತ್ತು ಸಲಹೆಗಳನ್ನು ಪರಿಗಣಿಸಿಕೊಂಡು ಅನುಮೋಧನೆಯನ್ನು ನೀಡುವುದು. ವಿಡಿಪಿಯನ್ನು ಅನುಮೋಧಿಸುವಾಗ, ಸಮಿತಿಯು ಸ್ಪಷ್ಟವಾಗಿ ವಿವಿಧ ಘಟಕಗಳ ಅಂತರ ಮತ್ತು ನಿರ್ದಿಷ್ಠ ಗುರಿಗಳನ್ನು ಮೂರು ತಿಂಗಳು, ಆರು ತಿಂಗಳು, ಒಂಬತ್ತು ತಿಂಗಳು, ಒಂದು ವರ್ಷ ಮತ್ತು ಹೆಚ್ಚಿನ ಅವಧಿಗೆ ತಿಳಿಸುವುದು.

9. ಯೋಜನೆ ರೂಪಿಸುವುದು ಮತ್ತು ಮಂಜೂರಾತಿ:

ಅನುಮೋಧನೆಗೊಂಡಿರುವ ಯೋಜನೆಯ ಘಟಕಗಳನ್ನು ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳು ಇನ್ನು ಮುಂದೆ ಕಾರ್ಯಕ್ರಮಗಳಾಗಿ ಪರಿವರ್ತಿಸುವುದು ಹಾಗೂ ಆಡಳಿತಾತ್ಮಕ, ಆರ್ಥಿಕ ಮತ್ತು ತಾಂತ್ರಿಕ ಅನುಮೋಧನೆಗಳನ್ನು ಆಯಾಯ ಯೋಜನೆಗಳ ಮಾರ್ಗಸೂಚಿಗಳನ್ವಯ ಪಡೆದುಕೊಳ್ಳುವುದು. ಜಿಲ್ಲಾಧಿಕಾರಿಗಳು ಸ್ವತಃ ಖುದ್ದಾಗಿ ಸರಳವಾಗಿ ಮತ್ತು ಕಾಲಮಿತಿಯೊಳಗೆ ಚಟುವಟಿಕೆಗಳು ಪೂರ್ಣಗೊಳ್ಳುವಂತೆ ಸಮನ್ವಯತೆಯನ್ನು ಮಾಡಬೇಕು. ಇವರಿಗೆ ಒಬ್ಬ ಅಧಿಕಾರಿಯು ಸಹಾಯಮಾಡಬೇಕು.

10. ಬಹಿರಂಗಪಡಿಸುವುದು ಮತ್ತು ಪ್ರಚುರಪಡಿಸುವುದು:

ಅನುಮೋಧನೆಗೊಂಡ ಯೋಜನೆಯು ಎಲ್ಲಾ ಪ್ರಕ್ರಿಯೆಗಳ ಮತ್ತು ಎಲ್ಲಾ ಘಟಕಗಳ ಭೌತಿಕ ಮತ್ತು ಹಣಕಾಸಿನ ಅಂಶಗಳನ್ನು ಹಾಗೂ ನಿರೀಕ್ಷಿತ ಕಾರ್ಯಕ್ರಮಗಳು ಮತ್ತು ಪರಿಣಾಮಗಳ ವಿವರಗಳನ್ನು ಸ್ವ ಪ್ರೇರಿತವಾಗಿ ಬಹಿರಂಗಪಡಿಸುವುದು ಮತ್ತು ಪ್ರಚುರಪಡಿಸುವುದು.

ಯೋಜನಾ ಪ್ರಕ್ರಿಯೆಯು ಸುವ್ಯವಸ್ಥಿತವಾದ ಪರಿಸರದ ನಿರ್ಮಾಣ ಮತ್ತು ಸಾಮಾಜಿಕ ಕ್ರೋಢಿಕರಣದ ಚಟುವಟಿಕೆಗಳನ್ನು ಕೈಗೊಳ್ಳಲು ವೇದಿಕೆಯನ್ನು ರೂಪಿಸುವುದನ್ನು ಖಾತರಿಪಡಿಸಬೇಕು. ಆದರೂ ಇದು ಸಹ ಎಲ್ಲಾ ಹಿಂದಿನ ಕಾರ್ಯಕ್ರಮಗಳಂತೆ ನಿರಂತರ ಅಥವಾ ತಾಂತ್ರಿಕ ಚಟುವಟಿಕೆಯಾಗದಿರುವಂತೆ ಹೆಚ್ಚಿನ ಗಮನವನ್ನು ನೀಡಬೇಕು.

ಸೂಚನೆ: ಯೋಜನೆಯಡಿ ವಿತರಣೆಯನ್ನು ವರ್ಗೀಕರಿಸುವುದು ಮತ್ತು ವರದಿಯನ್ನು ತಕ್ಷಣ (3 ತಿಂಗಳೊಳಗೆ), ಚಿಕ್ಕ ಅವಧಿ (6 ತಿಂಗಳೊಳಗೆ), ಮಧ್ಯಮ ಅವಧಿ (1 ವರ್ಷದೊಳಗೆ) ಮತ್ತು ದೀರ್ಘಾವಧಿ (1 ವರ್ಷಕ್ಕಿಂತ ಹೆಚ್ಚು).

ಅನುಬಂಧ-2

SAGY Progress (2019-21)				
SL NO	Constituency	Phase VI (2019-20)	Phase V (2020-21)	Phase IV (2021-22)
1	Mandya	NOT IDENTIFIED	Besagarahalli (Mandya)	Basaralu (Mandya)
2	Belgaum	Thorangatti (Belgaum)	NOT IDENTIFIED	Ugar B K (Belgaum)
3	Chitradurga	NOT IDENTIFIED	NOT IDENTIFIED	NOT IDENTIFIED
4	Uttara Kannada	NOT IDENTIFIED	NOT IDENTIFIED	NOT IDENTIFIED
5	Hassan	NOT IDENTIFIED	NOT IDENTIFIED	NOT IDENTIFIED
6	Chamrajanagar	NOT IDENTIFIED	NOT IDENTIFIED	NOT IDENTIFIED
7	Bagalkot	NOT IDENTIFIED	Bagavati (Bagalkot)	NOT IDENTIFIED
8	Bangalore North	Chennenahalli (Bengaluru Urban)	NOT IDENTIFIED	NOT IDENTIFIED
9	Chikkodi	Akkol (Belgaum)	NOT IDENTIFIED	NOT IDENTIFIED
10	Vijayapura	NOT IDENTIFIED	NOT IDENTIFIED	Benakanahalli (Vijayapura)
11	Dharwad	NOT IDENTIFIED	NOT IDENTIFIED	NOT IDENTIFIED
12	Koppal	Gunda (Raichur)	NOT IDENTIFIED	NOT IDENTIFIED
13	Udupi Chikmagalur	NOT IDENTIFIED	NOT IDENTIFIED	Sunnadahalli (Chikkamagaluru)
14	Dakshina Kannada	NOT IDENTIFIED	NOT IDENTIFIED	NOT IDENTIFIED
15	Gulbarga	Malagatti (Gulbarga)	NOT IDENTIFIED	NOT IDENTIFIED
16	Bidar	NOT IDENTIFIED	NOT IDENTIFIED	NOT IDENTIFIED
17	Bangalore South	NOT IDENTIFIED	NOT IDENTIFIED	NOT IDENTIFIED
18	Bangalore Central	NOT IDENTIFIED	NOT IDENTIFIED	NOT IDENTIFIED
19	Chikkballapur	NOT IDENTIFIED	Nelavagilu (Bengaluru Rural)	Gangaralu (Bengaluru Rural)
20	Tumkur	Kuramkotte (Tumkur)	Marashettyhalli (Tumkur)	NOT IDENTIFIED
21	Kolar	NOT IDENTIFIED	Kyasamballi (Kolar), Banahalli(Kolar)	Avani (Kolar)
22	Raichur	NOT IDENTIFIED	Kollur (Yadgir)	NOT IDENTIFIED
23	Davanagere	Suraturu (Davangere)	NOT IDENTIFIED	NOT IDENTIFIED
24	Mysore	NOT IDENTIFIED	NOT IDENTIFIED	7th Hoskote (Kodagu)
25	Bellary	Ujjini (Bellary)	NOT IDENTIFIED	NOT IDENTIFIED
26	Bangalore Rural	NOT IDENTIFIED	Banagahyally (Ramanagara)	NOT IDENTIFIED
27	Haveri	NOT IDENTIFIED	NOT IDENTIFIED	NOT IDENTIFIED
28	Shimoga	NOT IDENTIFIED	NOT IDENTIFIED	NOT IDENTIFIED
29	Rajya Sabha (Prabhakar Kore)	Kadapur (Belagaum)	NOT IDENTIFIED	NOT IDENTIFIED
30	Rajya Sabha (G C Chandrashekar)	Kodigehalli (Bengaluru Urban)	NOT IDENTIFIED	NOT IDENTIFIED
31	Rajya Sabha (Iranna Bhimappa Kadadi)	NOT IDENTIFIED	Inamahongal (Belgaum)	T Shigihalli (Belgaum)

ಅನುಬಂಧ - 3

SAGY - 2014-21 (Mandya Constituency)

SL NO	Phase	MP	Taluk	Identified GP	Village Development Plan	Total No of Projects	No of projects completed	No of projects in progress	No of Projects yet to start
1	I (2014-16	Shri Puttaraju C S	Pandavapura	T.s. Chatra	Uploaded	253	244	1	8
2	II (2016-19	Shri Puttaraju C S	Mandya	Maragowdanahalli	Uploaded	116	110	6	0
3	II (2016-20	Sh. Vijay Mallya	Maddur	Doddarasinakare	Uploaded	69	69	-	-
4	V (2020-21)	Sumalatha Ambareesh	Maddur	Besagarahalli	Uploaded	160	-	-	160
5	Vi (2021-22)	Sumalatha Ambareesh	Mandya	Basaralu	Baseline Survey in progress	-	-	-	-